# ಭಾರತ-ಫ್ರಾನ್ಸ್: 'ವಿಶೇಷ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆ'

## ಇದೀಗ ಸುದ್ದಿಯಲ್ಲಿದೆ:




ನವದೆಹಲಿಯಲ್ಲಿ ನಡೆಯುತ್ತಿರುವ 'ಎಐ ಇಂಪ್ಯಾಕ್ಟ್ ಶೃಂಗಸಭೆ'ಯಲ್ಲಿ ಪಾಲ್ಗೊಳ್ಳಲು ಫ್ರಾನ್ಸ್ ಅಧ್ಯಕ್ಷರು 3 ದಿನಗಳ ಅಧಿಕೃತ ಭೇಟಿಗಾಗಿ ಭಾರತಕ್ಕೆ ಆಗಮಿಸಿದ್ದಾರೆ.

## ಪ್ರಮುಖ ಬೆಳವಣಿಗೆಗಳು / ಫಲಿತಾಂಶಗಳು:

- ಪ್ರಧಾನಿ ಮೋದಿಯವರು ಫ್ರಾನ್ಸ್‌ನೊಂದಿಗೆ 'ವಿಶೇಷ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆ'ಯನ್ನು ಸ್ಥಾಪಿಸುವುದಾಗಿ ಘೋಷಿಸಿದರು.
- **'ಭಾರತ-ಫ್ರಾನ್ಸ್ ನಾವೀನ್ಯತಾ ವರ್ಷ'** ಮತ್ತು **'ಭಾರತ-ಫ್ರಾನ್ಸ್ ನಾವೀನ್ಯತಾ ಜಾಲ'**ಕ್ಕೆ ಚಾಲನೆ ನೀಡಲಾಯಿತು.
- **ಕರ್ನಾಟಕದ ವೇಮಗಲ್‌ನಲ್ಲಿ 'H125 ಹೆಲಿಕಾಪ್ಟರ್ ಅಂತಿಮ ಜೋಡಣಾ ಘಟಕ'**ವನ್ನು ಉದ್ಘಾಟಿಸಲಾಯಿತು.
- ಭಾರತದಲ್ಲಿ **'ಹ್ಯಾಮರ್' ಕ್ಷಿಪಣಿಗಳನ್ನು** ಉತ್ಪಾದಿಸಲು **ಬಿಇಎಲ್ ಮತ್ತು ಸಫ್ರಾನ್ ಕಂಪನಿಗಳ** ನಡುವೆ ಜಂಟಿ ಉದ್ಯಮವನ್ನು ಸ್ಥಾಪಿಸಲಾಗುತ್ತಿದೆ.
- 50% — **ರಫೇಲ್** ಯುದ್ಧವಿಮಾನಗಳಲ್ಲಿ ಶೇಕಡಾ 50 ರಷ್ಟು **"ಸ್ಥಳೀಯ ಪರಿಕರಗಳ"** ಬಳಕೆಯನ್ನು ಹೆಚ್ಚಿಸಲು ಹಾಗೂ **ಭಾರತದಲ್ಲಿಯೇ ರಫೇಲ್ ನಿರ್ವಹಣೆ, ದುರಸ್ತಿ ಮತ್ತು ನವೀಕರಣ (MRO)** ಸೌಲಭ್ಯವನ್ನು ವಿಸ್ತರಿಸಲು ಭಾರತವು ಫ್ರಾನ್ಸ್‌ಗೆ ಮನವಿ ಮಾಡಿದೆ.

## ಭಾರತ-ಫ್ರಾನ್ಸ್ ಸಂಬಂಧಗಳು:

### ರಫೇಲ್ ಯುದ್ಧವಿಮಾನಗಳು:-

1998

- ಭಾರತವು **ಡಸಾಲ್ಟ್ ಏವಿಯೇಷನ್** ಕಂಪನಿಯಿಂದ 36 ರಫೇಲ್ ವಿಮಾನಗಳನ್ನು ಖರೀದಿಸಿದೆ.
- **ರಫೇಲ್-ಎಂ:-** ಇತ್ತೀಚಿಗೆ, ಭಾರತೀಯ ನೌಕಾಪಡೆಗಾಗಿ 26 ರಫೇಲ್-ಎಂ ಯುದ್ಧವಿಮಾನಗಳನ್ನು ಖರೀದಿಸಲು ಉಭಯ ದೇಶಗಳು ಅಧಿಕೃತವಾಗಿ 'ಅಂತರ-ಸರ್ಕಾರಿ ಒಪ್ಪಂದ'ಕ್ಕೆ (IGA) ಸಹಿ ಹಾಕಿವೆ.

### ಸ್ಕಾರ್ಪೀನ್ ಜಲಾಂತರ್ಗಾಮಿಗಳು (ಪ್ರಾಜೆಕ್ಟ್ P-75):-

- ಫ್ರಾನ್ಸ್‌ನ ನೇವಲ್ ಗ್ರೂಪ್ ನ ಸಹಯೋಗದೊಂದಿಗೆ ಭಾರತದಲ್ಲಿಯೇ 6 ಜಲಾಂತರ್ಗಾಮಿ ನೌಕೆಗಳನ್ನು ನಿರ್ಮಿಸಲಾಗಿದೆ; ಇದರಲ್ಲಿ ಐಎನ್‌ಎಸ್ ವಾಗ್‌ಶೀರ್ ಇತ್ತೀಚಿನದಾಗಿದೆ.
- **ಜಂಟಿ ಸಮರಾಭ್ಯಾಸಗಳು:- ಶಕ್ತಿ, ವರುಣ, ಮತ್ತು ಫ್ರಿಂಜೆಕ್ಸ್-23.**

### ಯುಪಿಐ (UPI):-

- ಫ್ರಾನ್ಸ್‌ನಲ್ಲಿ 'ಏಕೀಕೃತ ಪಾವತಿ ವ್ಯವಸ್ಥೆ' (UPI) ಯನ್ನು ಅಳವಡಿಸುವ ಪ್ರಕ್ರಿಯೆಯು ಯಶಸ್ವಿಯಾಗಿದೆ.
- **ಬಾಹ್ಯಾಕಾಶ ಕಾರ್ಯಾಚರಣೆಗಳು:- ತೃಷ್ಣಾ (TRISHNA - ಉಪಗ್ರಹ ಮಿಷನ್), ಎಂಡಿಎ (MDA) ವ್ಯವಸ್ಥೆಗಳು ಮತ್ತು ಭೂ-ಕೇಂದ್ರ(ಗ್ರೌಂಡ್ ಸ್ಟೇಷನ್)ದ ಬೆಂಬಲ.**

### ಬಾಹ್ಯಾಕಾಶ ಕಾರ್ಯಾಚರಣೆಗಳು:-

- ವಿಶ್ವದಾದ್ಯಂತ ಸೌರಶಕ್ತಿಯನ್ನು ಉತ್ತೇಜಿಸಲು 2015 ರಲ್ಲಿ ಭಾರತ ಮತ್ತು ಫ್ರಾನ್ಸ್ ಜಂಟಿಯಾಗಿ ಇದನ್ನು ಸ್ಥಾಪಿಸಿದವು.